ಮೇಃ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ

ಸಿ.ಸಿ ನಂ- 1034/2015

ಸಿಡಬ್ಲ್ಯು-2

| | |
|---|---|
| ಹೆಸರು | ಸಿದ್ದಪ್ಪ ಗೊಂಪ್ಯಾಗೋಳ |
| ತಂದೆಯ ಹೆಸರು | ಹನಮಂತ ಗೊಂಪ್ಯಾಗೋಳ |
| ವಯಸ್ಸು | 41 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮಾಳಾಪೂರ , ಮುಧೋಳ. |

**ದಿನಾಂಕಃ 03-10-2022 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಶ್ರಿ. ಎ.ಎಸ್.ವಾಯ , ಪಿರ್ಯಾದುದಾರ ವಕೀಲರಿಂದ ঃ**

ಈ ಪಿರ್ಯಾದಿಯನ್ನು ನನ್ನ ತಂದೆ ಹನಮಂತ ತಂದೆ ಲಕ್ಷ್ಮಣ ಗೊಂಪ್ಯಾಗೋಳ ನೀಡಿರುತ್ತಾರೆ. ರುದ್ರಪ್ಪ ತಂದೆ ಲಕ್ಷ್ಮಣ ಗೊಂಪ್ಯಾಗೋಳ, ರಾಮಪ್ಪ ಲಕ್ಷ್ಮಪ್ಪ ಹಳಿಂಗಳಿ ಮತ್ತು ದ್ಯಾವಪ್ಪ ಸಿದ್ದಪ್ಪ ಗಡದೆ ಇವರ ಮೇಲೆ ನೀಡಿರುತ್ತಾರೆ.

ಆರೋಪಿತರು ಖೊಟ್ಟಿ ಬಾಂಡ ತಯಾರಿಸಿ ಅದಕ್ಕೆ ಸಹಿ ಮಾಡಿದಕ್ಕೆ ಈ ಪಿರ್ಯಾದಿಯನ್ನು ನನ್ನ ತಂದೆ ನೀಡಿರುತ್ತಾರೆ. ಆರೋಪಿತರು ಬಾಂಡ ಮೇಲೆ ನನ್ನ ಅಪ್ಪನ ಹೆಸರಿನ ಖೊಟ್ಟಿ ಸಹಿ ಮಾಡಿರುತ್ತಾರೆ. ಕರಾರು ರದ್ದಾದ ಬಗ್ಗೆ ಮತ್ತು ಹಣ ಮುಟ್ಟಿದೆ ಎಂದು ಖೊಟ್ಟಿ ಬಾಂಡ ಮಾಡಿರುತ್ತಾರೆ. ಆರೋಪಿತರು ಖೊಟ್ಟಿ ಬಾಂಡ ಮಾಡಿದ್ದರ ಬಗ್ಗೆ ಪಿರ್ಯಾದಿದಾರ ನನ್ನ ತಂದೆಗೆ ಆರೋಪಿ ನಂ. ೧ ರವರು ಕಂಪ್ಲೇಂಟ ಮಾಡಿದ ಮೇಲೆ ತಿಳಿಯಿತು.

ಆರೋಪಿ ನಂ.೧ ನನ್ನ ಅಪ್ಪನಿಗೆ ಈ ಪ್ರಕರಣದ ಖೊಟ್ಟಿ ಬಾಂಡ ಮಾಡಿಕೊಂಡ ಆಸ್ತಿ ಮಾರಾಟ ಮಾಡುವ ಉದ್ದೇಶಕ್ಕೆ ಕರಾರು ಮಾಡಿಕೊಂಡಿದ್ದರು. ಈಗ ಈ ಪಿರ್ಯಾದಿ ನನ್ನ ತಂದೆ ಆರೋಪಿತರು ಖೊಟ್ಟಿ ಬಾಂಡ ಮಾಡಿಕೊಂಡಿರುವುದಕ್ಕೆ ನೀಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ:-**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ.**

ಸಾಕ್ಷಿಯ ಸಹಿ